# ಹೊಗರೇಕಾನು ಗಿರಿ ವೈಭವ



ಚಿತ್ರ– ಲೇಖನ:
**ಹೆಚ್.ಎಸ್. ಸುರೇಶ**

ಹೊಗರೇಕಾನು ಗಿರಿ ಒಂದು ಅದ್ಭುತವಾದ ಐತಿಹಾಸಿಕ ಸ್ಥಳ. ಜಗತ್ತಿನ ಎಂಥದೋ ಜಾಗಗಳಲ್ಲಿ ನೆಮ್ಮದಿ ಕಂಡುಕೊಳ್ಳಲು ಹೊರಟ ಮನುಷ್ಯನಿಗೆ ಈ ಸ್ಥಳದ ಪರಿಚಯವಾದರೆ ನೆಮ್ಮದಿ ದೊರಕಿದಂತೆ. ಚಾರಣಕ್ಕೆ ಹೇಳಿ ಮಾಡಿಸಿದ ಪ್ರದೇಶದಂತೆ ಕಂಡರೂ ಇಲ್ಲಿಗೆ ಬಂದ ಮೇಲೆ ಅನಾವರಣಗೊಳ್ಳುವ ಪ್ರಪಂಚವೇ ಬೇರೆ.

## ಏನಿದು ಹೊಗರೇಕಾನು ಗಿರಿ?

ಬೆಂಗಳೂರಿನಿಂದ ಉತ್ತರಕ್ಕೆ, ಬೆಂಗಳೂರು–ಹೊನ್ನಾವರ ರಸ್ತೆಯಲ್ಲಿ ಸುಮಾರು 220ನೇ ಕಿಲೋಮೀಟರ್ ಸಾಗಿದರೆ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಬೀರೂರು ಹೋಬಳಿ ಸಿಗುತ್ತದೆ. ಹೋಬಳಿ ಕೇಂದ್ರದ ವೃತ್ತದಿಂದ ಎಡಭಾಗಕ್ಕೆ ಚಲಿಸಿದರೆ ಲಿಂಗದಹಳ್ಳಿ, ಕೆಮ್ಮಣ್ಣುಗುಂಡಿ ದಾರಿ ಸಾಗುತ್ತದೆ. ಆ ರಸ್ತೆಯಲ್ಲಿ ಆಲದಹಳ್ಳಿ ಗೇಟ್ ಎಂದು ಆಲದಹಳ್ಳಿಯ ಊರಿನ ಬಸ್ಸಿನ ರಸ್ತೆಯ ಮಾರ್ಗ ಸಿಗುತ್ತದೆ. ಅಲ್ಲಿಂದ ಎಡಕ್ಕೆ ಎರಡು ದೊಡ್ಡ ಆಲದ ಮರಗಳ ನಡುವೆ ಕಮಾನು ಇದೆ. ಅದರ ಎದುರಿಗೆ ಬಲ ಪಕ್ಕದಲ್ಲಿ ಹೊಗರೇಕಾನು ಗಿರಿ ಜೀವ ವೈವಿಧ್ಯಗಳ ತಾಣ ಎಂಬ ಮಾರ್ಗ ನಾಮಫಲಕ ಕಾಣುತ್ತದೆ. ಆ ರಸ್ತೆ ಮಾರ್ಗವಾಗಿ ಆಲದ ಹಳ್ಳಿ, ಹೊಗರೇಹಳ್ಳಿಗಳ ಮೂಲಕ ಹಾದು ಏಳು ಕಿಲೋಮೀಟರ್ ಅಂಕುಡೊಂಕಾದ ರಸ್ತೆ ಮತ್ತು ಗುಡ್ಡಗಳ ನಡುವೆ ಚಲಿಸಿದರೆ ಸಿಗುವುದೇ ಬೆಟ್ಟಗಳ ನಡುವೆ ಕಾಡಿನಲ್ಲಿ ಇರುವ ಸುಂದರ ತಾಣ ಹೋಗರೇಕಾನು ಗಿರಿ. ಪಶ್ಚಿಮ ಘಟ್ಟಗಳ ವೈವಿಧ್ಯಮಯ ಪ್ರದೇಶ.

## ಹೆಸರಿನ ವಿಶೇಷ

ಹೊಗರೇಕಾನು ಗಿರಿಯೆಂದರೆ ಪ್ರಕಾಶಮಾನವಾದ ಕಾಡುಗಳನ್ನುಳ್ಳ ಗಿರಿಪ್ರದೇಶ. ಒಂದು ಕಾಲದಲ್ಲಿ ಈ ಪ್ರದೇಶದಲ್ಲಿ ದಟ್ಟ ನಿತ್ಯಹರಿದ್ವರ್ಣದ ಕಾಡಿತ್ತು. ಇಂದು ಕಾಡು ದಾಳಿಕೋರರ ಅವಸ್ಥೆಯಿಂದ ಕಾನನ ಸ್ವಲ್ಪ ಕಡಿಮೆಯಾದರೂ ತನ್ನ ಸೌದಂರ್ಯವನ್ನು ಉಳಿಸಿಕೊಂಡಿದೆ.

ಈ ಸ್ಥಳದ ಮಹಿಮೆಯನ್ನು ಇತಿಹಾಸ ಹಾಗೂ ಜೀವವೈವಿಧ್ಯದ ಆಯಾಮಗಳಲ್ಲಿ ನೋಡಬಹುದು. ಇಲ್ಲಿ ಮುಜರಾಯಿ ಇಲಾಖೆಗೆ ಸೇರಿದ ಶ್ರೀ ಸಿದ್ದೇಶ್ವರ ಸ್ವಾಮಿ ದೇವಸ್ಥಾನ ಭಾರೀ ದೊಡ್ಡ ಕಲ್ಲಿನ ಗುಹೆಯ ಒಳಗಿದೆ. ಅದೇ ಈ ಊರಿನ ಹಾಗೂ ಸುತ್ತಮುತ್ತಲ ಜನರ ಕೇಂದ್ರಬಿಂದು. ಇಲ್ಲಿನ ಜನರು ಪ್ರತಿಯೊಂದು ಹಬ್ಬಗಳನ್ನು ತುಂಬ ಭಕ್ತಿ, ಶ್ರದ್ಧೆಗಳಿಂದ ಆಚರಿಸುತ್ತಾರೆ.

ಈ ಊರಿನಲ್ಲಿರುವ ಇತರೇ ಪವಿತ್ರ ಸ್ಥಳಗಳೆಂದರೆ ದೇವಸ್ಥಾನದ ಬಲ ಪಕ್ಕಲ್ಲಿರುವ ಬನಶಂಕರಿ ಅಮ್ಮನವರ ದೇವಸ್ಥಾನ, ಎಡಭಾಗದಲ್ಲಿ ಚೌಡಮ್ಮ, ಅದರ ಪಕ್ಕದಲ್ಲಿ ರಂಗನಾಥಸ್ವಾಮಿ ದೇವಸ್ಥಾನ. ಇದರೊಳಗಿರುವ ಸುರಂಗ